ಆದರ ರಾಕ್ಷಸ ಹೊರಗಲ್ಲಾ ಮನ್ಯಾಗನ ಕಾಯ್ದು ಕೂತಿದ್ದಾ ಅಂತ ನಮಗ ತಿಳೀಲೇ ಇಲ್ಲಾ" ಎಂದು ದೀರ್ಘವಾದ ಉಸಿರು ಬಿಟ್ಟು ನಿಲ್ಲಿಸಿದ. ಖಾನಾಪುರದಲ್ಲಿ ಮುಳುಗಿ ತನ್ಮಯನಾಗಿ ಕೇಳುತ್ತಿದ್ದ ನನಗೆ ರಸಭಂಗವಾದಂತಾಗಿ ಹೊರಳಿ ಅತ್ತಿತ್ತ ನೋಡಿದೆ. ಆಗಲೇ ಚಿತ್ರದುರ್ಗ ಬಂದಿತ್ತು. "ಊಟಾ ಮಾಡಿಬಿಡೋಣ್ರಿ ಸರ್. ಆಮ್ಯಾಲೆ ಮತ್ತ ಘೋಲೊ ಹೋಟಲ್ ಸಿಗಾಣಿಲ್ಲ" ಎಂದು ಕಾರು ನಿಲ್ಲಿಸಿ ಇಳಿದ. ನನಗೋ ಕತೆ ಮುಂದೆ ಕೇಳುವ ತವಕ. ಓ. ಹೆನ್ರಿಯ ಪತ್ತೇದಾರಿ ಕತೆಯಂತೆ ಕುತೂಹಲದ ತಿರುವಿನಲ್ಲಿ ನಿಲ್ಲಿಸಿಬಿಟ್ಟಿದ್ದ. ಆದರೂ ಉಪಾಯವಿಲ್ಲದೆ ಅವನನ್ನು ಹಿಂಬಾಲಿಸಿದೆ. ಊಟ ಪರವಾಗಿಲ್ಲ ಎನ್ನುವಂತಿತ್ತು. ಬಿಲ್ ಅವನ ಕೈಯಿಂದ ಕಸಿದು ನಾನೇ ಕೊಟ್ಟೆ. ಊಟದ ಜೊತೆಗಿಟ್ಟ ಪಾನ್ ಬೇಡವೆಂದು ಅವನಿಗೇ ಕೊಟ್ಟೆ. ಒಮ್ಮೆ ವಾಶ್‌ರೂಮಿಗೆ ಭೇಟಿ ಕೊಟ್ಟು ಮರಳಿ ಕಾರೇರಿದೆವು.

ಬಾಯಲ್ಲಿ ಎರಡೂ ಪಾನ್‌ಗಳನ್ನು ಒಟ್ಟಿಗೆ ತುಂಬಿಕೊಂಡ ಮಹಾಶಯ ಕಾರು ಓಡಿಸತೊಡಗಿದ. ಆದರೆ ನಾನು ಕತೆಗಾಗಿ ಅವನ ಬಾಯಲ್ಲಿನ ಪಾನ್ ಮುಗಿಯುವವರೆಗೆ ಕಾಯುವದು ಅಸಹನೀಯವಾಗಿತ್ತು. ನಂತರವೂ ಕತೆಯ ಸುಳಿವಿಲ್ಲದೇ ಸಣ್ಣಗೆ ಹಾಡು ಗುನುಗುತ್ತ ಓಡಿಸತೊಡಗಿದ. ತಡೆಯಲಾರದೇ "ಗೆಳ್ಯಾನ ಮನಿ ಕಥಿ ಅರ್ಧಾಕ್ಕ ನಿಂದ್ರಸಿದೆಲ್ಲೋ..." ಎಂದೆ. "ಹೌದಲಾ... ಎಲ್ಲಿದ್ದೆ?... ಹ್ಞಾಂ, ಗಂಗಾ ಮನಿ ಎಲ್ಲಾ ಛಂದಾಗಿ ನೋಡಕೊಳ್ಳಾಕಿ. ನಾವೆಲ್ಲಾ ಅಭ್ಯಾಸ ಮಾಡಿ, ಊಟಾ ಮಾಡಿ ಮಲಕೊಂಡ ಮ್ಯಾಲೆ ಅಪ್ಪ ತೂರ್ಯಾಡಕೋತ ಬರ್ತಿದ್ದ. ಭರ್ತಿ ನಶಾದಾಗ. ಅಕಿನ ಊಟಾ ನೀಡಾಕಿ. ಮದ್ಲ ಹೆಂಡ್ತಿ ಕೆಲಸಕ್ಕ ಹೋಗೋದು ಅಪ್ಪಗ ಬರೋಬರಿ ಅನಸ್ತಿದ್ದಿದ್ದಿಲ್ಲ. ವದರ್ಯಾಡತಿದ್ದ. ಹೊಟ್ಟಿ ಹಸಿವಿ ತೀರಿದ ಮ್ಯಾಲ ಮೈ ಹಸಿವಿ ಹೆಂಗ ತೀರಸೋದು? ಅಂವಗ ಬ್ಯಾರೇ ಹಾದಿ ಕಾಣಲಿಲ್ಲ. ನಶಾದಾಗ ಏನ ಮಾಡ್ಲಿಕ್ಕತ್ತೇನಿ ಅಂಬೋ ಖಬರೂ ಇದ್ದಿದ್ದಿಲ್ಲ. ಇಕಿ ಮಗಳನ್ನೋ ಅರಿವ ಇರಲಿಲ್ಲ. ಅಕಿನ್ನ ಎಳಕೊಂಡು ಖೋಲಿಗ್ಹೋದ. ನಾವೆಲ್ಲಾ ಗಡದ್ದ ನಿದ್ದಿ ಹೊಡ್ಯಾಕತ್ತಿದ್ವಿ. ಗೊತ್ತ ಆಗಲಿಲ್ಲ. ಪಾಪ, ಸಣ್ಣ ಹುಡುಗಿ, ಅತ್ತ ಅತ್ತ ಸೋತ ಹೋದ್ಲು. 'ಯಾರಗರೆ ಹೇಳಿದ್ರ ನೋಡು' ಅಂತ ಅಂಜಸಿದ. ಅಕಿ ಬಾಯ ತಗೀಲಿಲ್ಲ. ಅವ್ವ ಮಧ್ಯಾಹ್ನ ಬಂದು ಕಣ್ಣು ಕೆಂಪಾದದ್ದು ನೋಡಿ 'ಯಾಕ ಅಳಾತಿದ್ದಿ?' ಎಂದು ಕೇಳಿದಾಗ 'ಹೊಟ್ಟಿ ನೂಯಾಕ್ಕತ್ತಿತ್ತು' ಅಂದು ಸುಮ್ಮನಾದ್ಲು. ಅವ್ವ ನನ್ನ ಕಡಿಂದ ಅಜವಾನದ ಎಲಿ ತರಿಸಿ ತಿನಿಸಿ ಕೆಲಸಕ್ಕ ಹೋಗಿಬಿಟ್ಲು.

